(3) ನಿಗಮದಿಂದ ಭೂ ಒಡೆತನ ಯೋಜನೆಯಡಿ ಮಂಜೂರಾದ ಜಮೀನು ಹೊಂದಿರುವ ಫಲಾನುಭವಿಗಳಿಗೆ 3ನೇ ಆದ್ಯತೆಯನ್ನು ನೀಡಲಾಗುವುದು.

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ; ಫಲಾನುಭವಿಗಳು ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ, 3ಬಿಗೆ ಸೇರಿದವರಾಗಿದ್ದು, ಸಣ್ಣ ಹಾಗೂ ಅತಿ ರೈತರುಗಳಾಗಿರಬೇಕು. ಅವರ ಜಮೀನುಗಳಿಗೆ ಯಾವುದೇ ರೀತಿಯ ನೀರಾವರಿ ಸೌಲಭ್ಯ ಹೊಂದಿರಬಾರದು ಹಾಗೂ ಅವರ ಆದಾಯ 22,000/–ರೂ.ಗಳ ಮಿತಿಯ ಒಳಗೆ ಇರಬೇಕಾಗಿರುತ್ತದೆ. ವೈಯಕ್ತಿಕ ಯೋಜನೆಯಲ್ಲಿ ಪ್ರವರ್ಗ–1 ಮತ್ತು 2ಎಗೆ ಸೇರಿದ ಹಿಂದುಳಿದ ವರ್ಗಗಳಿಗೆ ಸೇರಿದ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಆಯ್ಕೆಗೆ ಪರಿಗಣಿಸಲಾಗುತ್ತದೆ.

ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ:– ಫಲಾನುಭವಿಗಳ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿರಬೇಕು, 2 ಎಕರೆಯಿಂದ 5 ಎಕರೆ ಜಮೀನನ್ನು ಹೊಂದಿದ್ದು ಇವರು ಸಣ್ಣ ಹಿಡುವಳಿದಾರರಾಗಿರಬೇಕು, ಇವರ ವಾರ್ಷಿಕ ಆದಾಯದ ಮಿತಿಯು ರೂ. 22.000/–ಗಳ ಒಳಗಿರಬೇಕು.

ಮೇಲ್ಕಂಡ ನಿಬಂಧನೆಗೊಳಪಡಿಸಿ, ಅರ್ಜಿದಾರರ ಪಟ್ಟಿ ಮಾಡಿ, ಮಾನ್ಯ ಶಾಸಕರುಗಳ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿಯ ಮುಂದೆ ಪ್ರಸ್ತಾವನೆಗಳನ್ನು ಮಂಡಿಸಿ, ಸಮಿತಿಯಿಂದ ಆಯ್ಕೆಗೊಂಡ ಅರ್ಹ ಫಲಾಪೇಕ್ಷಿಗಳಿಗೆ ನಿಯಮಾನುಸಾರ ಕೊಳವೆಬಾವಿ ಸೌಲಭ್ಯ ಒದಗಿಸಲಾಗುವುದು.

1164 (1500) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯಾದ್ಯಂತ ಇರುವ ಖಾಸಗಿ ಹಾಗೂ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು;

(ಆ) ಪ್ರಸ್ತುತ ವರ್ಷದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವೈದ್ಯಕೀಯ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಖಾಸಗಿ ಹಾಗೂ ಸರ್ಕಾರಿ ಕಾಲೇಜುಗಳ ಸಂಪೂರ್ಣ ವಿವರ ನೀಡುವುದು)

(ಇ) ಬಡ ವಿದ್ಯಾರ್ಥಿಗಳೂ ವೈದ್ಯಕೀಯ ವಿದ್ಯಾಭ್ಯಾಸ ಮಾಡಲು ಸರ್ಕಾರ ಒದಗಿಸುತ್ತಿರುವ ಸೌಲಭ್ಯಗಳೇನು;

(ಈ) ಈ ಸೌಲಭ್ಯಗಳು ನೈಜವಾಗಿ ದೊರೆಯಬೇಕಾದ ವಿದ್ಯಾರ್ಥಿಗೆ ತಲುಪುತ್ತಿದೆಯೇ;

(ಉ) ಸುಳ್ಳು ದಾಖಲೆ ಒದಗಿಸಿ ಸರ್ಕಾರಿ ಸವಲತ್ತುಗಳನ್ನು ಪಡೆಯುತ್ತಿರುವ ವಿದ್ಯಾರ್ಥಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ಒದಗಿಸುವುದು)

ಡಾ॥ ವಿ.ಎಸ್. ಆಚಾರ್ಯ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು)

(ಅ) ಸರಕಾರಿ ವೈದ್ಯಕೀಯ ಕಾಲೇಜುಗಳು–10

ಖಾಸಗಿ ವೈದ್ಯಕೀಯ ಕಾಲೇಜುಗಳು –29

(ಆ) ಪಟ್ಟಿ ಲಗತ್ತಿಸಿದೆ.

(ಇ) ಸರ್ಕಾರದ ಆದೇಶ ಸಂಖ್ಯೆ: ಎಸ್ ಡಬ್ಲ್ಯೂಎಲ್ 229 ಬಿಸಿಎ 82, ದಿನಾಂಕ 16–12–1982ರ ಪ್ರಕಾರ ರಾಜ್ಯದ ಖಾಸಗಿ ವೈದ್ಯಕೀಯ ಮತ್ತು ದಂತ ಮಹಾವಿದ್ಯಾಲಯಗಳಲ್ಲಿನ ಸರ್ಕಾರದ ಉಚಿತ ಸ್ಥಾನಗಳಿಗೆ ಸಿ.ಇ.ಟಿ. ಮೂಲಕ ಆಯ್ಕೆಯಾದ ವಿದ್ಯಾರ್ಥಿಯ ತಂದೆ–ತಾಯಿ, ಪೋಷಕರ ಹಾಗೂ ಕುಟುಂಬದ ಎಲ್ಲಾ ಮೂಲಗಳಿಂದ ಕೂಡಿದ ವಾರ್ಷಿಕ ಆದಾಯ ರೂ. 11.000–00 ಮತ್ತು ಅದಕ್ಕಿಂತ ಕಡಿಮೆ ಆದಾಯವಿರುವ ಹಿಂದುಳಿದ ವರ್ಗಗಳ 2ಎ: 2ಬಿ: 3ಎ: 3ಬಿ ವಿದ್ಯಾರ್ಥಿಗಳಿಗೆ ಮತ್ತು ಯಾವುದೇ ಆದಾಯ ಮಿತಿಯಿಲ್ಲದೆ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ಸರ್ಕಾರಿ ವೈದ್ಯಕೀಯ ದಂತ ಮಹಾವಿದ್ಯಾಲಯಗಳಿಗೆ ನಿಗದಿಪಡಿಸಿರುವ ದರಗಳ ಪ್ರಕಾರ ಅನ್ವಯಿಸುವ ಬೋಧನಾ ಶುಲ್ಕ ಮತ್ತಿತರ ಶುಲ್ಕಗಳನ್ನು ಫ್ರೀಶಿಪ್ ರೂಪದಲ್ಲಿ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದಿಂದ ಮಂಜೂರು ಮಾಡಲಾಗುವುದು ಮತ್ತು ಮಂಜೂರಾತಿ ಆದೇಶ ಪಡೆದ ವಿದ್ಯಾರ್ಥಿಗಳಿಗೆ ಫ್ರೀಶಿಪ್ ಹಣವನ್ನು ಸಂಬಂಧಿಸಿದ ತಾಲ್ಲೂಕು: ಜಿಲ್ಲಾ ಅಲ್ಪ ಸಂಖ್ಯಾತರ ಮತ್ತು ಹಿಂದುಳಿದ ವರ್ಗಗಳ ಇಲಾಖೆಯವರು ಅನುದಾನವನ್ನು ಬಿಡುಗಡೆ ಮಾಡಲಾಗುವುದು.

ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಮತ್ತು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದಿಂದ ಫ್ರೀಶಿಪ್ ಮಂಜೂರು ಮಾಡಿ ಸಂಬಂಧಪಟ್ಟ ಮಹಾವಿದ್ಯಾಲಯಗಳಿಗೆ ಹಣವನ್ನು ಬಿಡುಗಡೆ ಮಾಡಲಾಗುವುದು.

(ಈ) ಪ್ರತಿ ಆರ್ಥಿಕ ವರ್ಷದಲ್ಲಿ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವು ನಿಗದಿಪಡಿಸುವ ಅರ್ಜಿ ನಮೂನೆಯನ್ನು ಎಲ್ಲಾ ರೀತಿಯಿಂದಲೂ ಭರ್ತಿ ಮಾಡಿ ಅಗತ್ಯ ದೃಢೀಕೃತ ಪ್ರತಿಗಳೊಂದಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸಿರುವ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಫ್ರೀಶಿಪ್ ಸೌಲಭ್ಯಗಳನ್ನು ಮಂಜೂರು ಮಾಡಲಾಗುತ್ತಿದೆ.

(ಉ) ಈ ಬಗ್ಗೆ ಯಾವುದೇ ಪ್ರಕರಣಗಳ ವರದಿಯಾಗಿರುವುದಿಲ್ಲ.

ಸಂಖ್ಯೆ: ಆಆಶ: ೩೨೪ ಎಂಬಿಎಸ್ ೨೦೦೭

Annexure-I

Statement showing the details of Students studying in Government Medical Colleges during the academic year 2007 – 08

Sl.No	College Name	I Year	II Year	III Year Part-I	III Year Part-II
1	Bangalore Medical college & Research Center, Bangalore	165	41	152	28
2	Mysore Medical college & Research Center, Mysore	107	19	102	16
3	Karnataka Institute of Medical Sciences, Hubli	104	23	95	17
4	Vijayanagara Institute of Medical Sciences,Bellary	102	19	104	18
5	Mandya Institute of Medical Sciences, Mandya	100	-	-	-
6	Hassan Institute of Medical Sciences, Hassan	100	-	-	-
7	Belgaum Institute of Medical Sciences, Belgaum	97	-	-	-

The above figures includes fresher & repeaters (Students)

ವೈದ್ಯಕೀಯ ಶಿಕ್ಷಣ ಸಚಿವರು

ಸಂಖ್ಯೆ: ಆಆಶ ೩೨೪ ಎಂಪಿಎಸ್ ೨೦೦೭

Annexure-II

Statement showing the details of Students studying in Private Medical Colleges during the academic year 2007 – 08

Sl. No	Name of the College	I Year	II Year	III Year Part-I	III Year Part-II
1	St. John's Medical College, Bangalore	61	26	52	17
2	Dr. B.R. Ambedkar Medical College, Bangalore	138	73	37	36
3	Kempegowda Institute of Medical Sciences, Bangalore	150	76	72	36
4	M.S. Ramaiah Medical College, Bangalore	203	116	151	55
5	M V J Medical College, Bangalore	107	16	20	7
6	Vaidehi Institute of Medical Sciences, Bangalore	115	76	82	17
7	S. Nijalingappa Medical College, Bagalkot	105	33	83	47
8	Rajarajeswari Medical College, Bangalore	117	30	-	-
9	J.N. Medical College, Belgaum	31	87	147	39
10	Al Ameen Medical College, Bijapur	122	86	99	53
11	B.M. Patil Medical College, Bijapur	180	95	152	49
12	Basaveswara Medical College, Chitradurga	55	11	10	61
13	Father Muller's Medical College, Mangalore	101	27	110	18
14	K.S. Hegde Medical College, Mangalore	106	65	98	35
15	Yenepoya Medical College, Mangalore	111	72	81	52
16	A J Institute of Medical Sciences, Mangalore	131	89	70	34

Sl. No	Name of the College	I Year	II Year	III Year Part-I	III Year Part-II
17	KVG Medical College, Sullia	108	92	109	6
18	JJM Medical College, Davangere	296	173	214	65
19	SS Institute of Medical Sciences, Davangere	150	-	-	-
20	SDM Medical College, Dharwad	110	62	63	-
21	M.R. Medical College, Gulbarga	123	78	82	22
22	Khaja Bandh Navaz Institute of Medical Sciences, Gulbarga	121	94	62	39
23	Sri Devraj Urs Medical College, Kolar	174	124	138	41
24	Adi Chunchanagiri Institute of Medical Sciences, B.G. Nagar	129	58	51	32
25	J.S.S. Medical College, Mysore	188	129	131	44
26	Navodaya Medical College, Raichur	127	96	55	31
27	Sri Siddhartha Medical College, Tumkur	170	129	98	53
28	Kasturba Medical College, Mangalore	1110	From first year to final year		
29	Kasturba Medical College, Manipal	1141	From first year to final year		

The above figures includes fresher & repeater students

* * * *

ವೈದ್ಯಕೀಯ [illegible] ಸಚಿವರು

ಸ.ಕೇ.ಮು, ಫ–2, ಬೆ–59, ಕಾ.ಸೂ. ಸಂ. 0 3447, 350 ಪುಸ್ತಕಗಳು, ದಿನಾಂಕ : 28–11–2014